

# ನಾನು ಮಳೆ ನೀನು ಇಳೆ

ಸಖಿ,
ಮಳೆ ಸುರಿಯುತ್ತಲೇ ಇದೆ
ಬುವಿಯ ಮೇಲೆ
ಕಂಗೊಳಿಸುತ್ತಾಳೆ
ಮಳೆ ಆದ ಮೇಲೆ ಇಳೆ

ಇಳೆ ಮತ್ತು ಮಳೆ
ಅವಳಿ ಜವಳಿ ಅಲ್ಲವೇ? ಸಖಿ
ಇಳೆಯನ್ನು ನಂಬಿ ಮಳೆ
ಮಳೆಯನ್ನು ನಂಬಿ ಇಳೆ
ಇಬ್ಬರಲೂ
ಅನುರಾಗದ ಅಲೆ
ಇದನ್ನು ತಿಳಿದಾಗ
ಗುಡಿಸಲಿಗೂ ಬೆಲೆ

ಬೆವರಿಗೂ ಇದೇ
ಆದರದ್ದೇ ಆದ ನೆಲೆ, ಬೆಲೆ

ನಾನು ಬೆವರು
ನೀನು ಮಳೆಯ ಜಿನುಗು
ಅಲ್ಲೇ ಹುಟ್ಟುವುದು, ಕಟ್ಟುವುದು
ಗುಬ್ಬಿ ಗೂಡು
ಜೇನು ಹುಳುವಿನ ತೊಟ್ಟು
ಮೊಲೆ ಚೀಪುವ ಮುಟ್ಟು

ಸಖಿ,
ಮಳೆ ಸುರಿಯುತ್ತಲೇ ಇದೆ
ಬುವಿಯ ಮೇಲೆ
ಕಂಗೊಳಿಸುತ್ತಲೇ ಇದ್ದಾಳೆ ಇಳೆ

● ಸತ್ಯಾನಂದ ಪಾತ್ರೋಟ
ಕಲೆ: ವಾಗೀಶ ಹೆಗಡೆ

